**ದಿನಾಂಕಃ 16-02-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಎಸ್.ಎಸ್.ಕೆ ವಕೀಲರಿಂದಃ**

ಮೃತ ನನ್ನ ಮಗ ರಾಜು ಮಾನಸಿಕವಾಗಿ ಅಸ್ವಸ್ಥನಾಗಿದ್ದ ಎಂದರೆ ಸರಿಯಲ್ಲ. ಸದರಿ ಮೃತ ನನ್ನ ಮಗ ರಾಜು ಮಾನಸಿಕವಾಗಿ ಅಸ್ವಸ್ಥನಾಗಿದ್ದ ಕಾರಣಕ್ಕಾಗಿ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಮತ್ತು ಆತನಿಗೆ ಯಾವುದೇ ಆದಾಯವೂ ಸಹ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಮೃತ ನನ್ನ ಮಗ ರಾಜು ಅವಿವಾಹಿತನಾಗಿದ್ದ ಎಂದರೆ ಸರಿ. ಸದರಿ ಮೃತ ನನ್ನ ಮಗ ರಾಜು ಮಾನಸಿಕವಾಗಿ ಅಸ್ವಸ್ಥನಾಗಿದ್ದ ಕಾರಣಕ್ಕಾಗಿ ಆತನ ಮೇಲೆ ಅರ್ಜಿದಾರರಾದ ನಾವುಗಳು ಅವಲಂಭಿತರಾಗಿರಲಿಲ್ಲ ಆದರೆ ಆತನೇ ಅರ್ಜಿದಾರರಾದ ನಮ್ಮಗಳ ಮೇಲೆ ಅವಲಂಭಿತನಾಗಿದ್ದ ಎಂದರೆ ಸರಿಯಲ್ಲ.

ಸದರಿ ಅಪಘಾತ ಪೋಲಿಸ್ ದಾಖಲೆಗಳ ಪ್ರಕಾರ ದಿಃ 09-12-2020 ರಂದು ಜರುಗಿತ್ತು ಎಂದರೆ ಸರಿ. ಅಪಘಾತ

ಪಡಿಸಿದ ಮೋಟಾರ್ ಸೈಕಲ್ 2 ನೇ ಎದುರುದಾರನ ವಿಮೆಯ ಸಂಸ್ಥೆಯಲ್ಲಿ ದಿಃ 22-10-2019 ರಿಂದ ದಿಃ 21-10-2020 ರವರೆಗೆ O.D and T.P ರ ವಿಮೆ ಚಾಲ್ತಿಯಲ್ಲಿತ್ತು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ . ಸದರಿ ಅಪಘಾತದ ದಿನದಂದು ಸದರಿ ವಾಹನಕ್ಕೆ ವಿಮೆ ಚಾಲ್ತಿಯಲ್ಲಿ ಇರಲಿಲ್ಲ ಎನ್ನುವ ಕಾರಣಕ್ಕಾಗಿ 2 ನೇ ಎದುರುದಾರ ನಮಗೆ ಯಾವುದೇ ಪರಿಹಾರ ಮೊತ್ತ ನೀಡಲು ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೀಡಾಡದ ಹೊಂಡಾ ಸಿಬಿ ಶೈನ್ ಮೋಟಾರ್ ಸೈಕಲ್ ನಂ.ಕೆಎ.17/ಹೆಚ್.ಇ-1805 ರ ವಾಹನ 2 ನೇ ಎದುರುದಾರರ ಸಂಸ್ಥೆಯಲ್ಲಿ ವಿಮೆಗೆ ಒಳಪಟ್ಟಿರಲಿಲ್ಲ ಎನ್ನುವುದು ನನಗೆ ಗೊತ್ತಿಲ್ಲ .

ಸದರಿ ಅಪಘಾತವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ ಎಂದರೆ ಸರಿ. ಸದರಿ ಅಪಘಾತವನ್ನು ಕಣ್ಣಾರೆ ನೋಡಿದ ವ್ಯಕ್ತಿಗಳು ಈಗಲೂ ಜೀವಂತವಾಗಿದ್ದಾರೆ ಎಂದರೆ ಸರಿ. ಸದರಿ ಅಪಘಾತ ಮೃತ ರಾಜು ನನ್ನ ಮಗ ತಪ್ಪಿನಿಂದ ಆಗಿರುವ ಕಾರಣಕ್ಕಾಗಿ 2 ನೇ ಎದುರುದಾರ ನಮಗೆ ಯಾವುದೇ ಪರಿಹಾರ ಮೊತ್ತ ನೀಡಲು

ಬಾಧ್ಯಸ್ಥನಾಗಿರುವುದಿಲ್ಲ ಎಂದರೆ ಸರಿಯಲ್ಲ.

ಮೃತ ರಾಜು ಕೃಷಿ ಮತ್ತು ಕಿರಾಣಿ ಅಂಗಡಿ ನಡೆಸಿ ಪ್ರತಿ ತಿಂಗಳು 20 ಸಾವಿರ ರೂಪಾಯಿ ಆದಾಯ ಸಂಪಾದನೆ ಮಾಡುತ್ತಿದ್ದ ಎನ್ನುವ ಬಗ್ಗೆ ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ. ಮೃತ ರಾಜುವಿನ ಶವ-ಸಂಸ್ಕಾರ , ತಿಥಿ ಮತ್ತು ವಾಹನ ಖರ್ಚು-ವೆಚ್ಚಗಳಿಗಾಗಿ ರೂ.2,50,000/- ಹಣವನ್ನು ಖರ್ಚು ಮಾಡಿದ್ದೇವೆ ಎಂದು ತೋರಿಸಲು ನಾನು ನ್ಯಾಯಾಲಯಕ್ಕೆ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ.

ನಾನು ನ್ಯಾಯಾಲಯಕ್ಕೆ ಈ ಸುಳ್ಳು ಅರ್ಜಿಯನ್ನು ಸಲ್ಲಿಸಿ, ಸುಳ್ಳು ಪ್ರಮಾಣ ಪತ್ರವನ್ನ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

Sd/-

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆಎಂಎಫ್ ಸಿ ರಾಣೇಬೆನ್ನೂರು.